ನಂಬದಿರು ಈ ದೇಹ ನಿತ್ಯವಲ್ಲ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 59.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 128.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 300.
4. **Note:** The wordings are as per Ref. 1 (without highlights). The wordings in Ref. 2 are similar to Ref. 1 except few differences which are marked in yellow highlights. The lyrics in Ref. 3 are similar to Ref. 2.
5. **Note:** Singer has followed these lyrics.
6. **Note:** The Ankitas are different in Ref. 1 & Ref. 3. We have considered Ref. 1 as standard and taken that Ankita for listing.

ರಾಗ: ಮಧ್ಯಮಾವತಿ ತಾಳ: ಝಂಪೆ

ನಂಬದಿರು ಈ ದೇಹ ನಿತ್ಯವಲ್ಲ
ಅಂಬುಜಾಕ್ಷನ ಭಜಿಸಿ ಸುಖಿಯಾಗು ಮನವೆ ॥ ಪ ॥

ಎಲು (ಎಲುಬು) ರಕ್ತ ಮಾಂಸಗಳ ಮೇಲೆ ಚರ್ಮದ ಹೊದಿಕೆ
ಮಲ ಮೂತ್ರ ಒಳಗೆ (ಒಳಗೆ ಮಲ ಮೂತ್ರಾದಿ) ಕ್ರಿಮಿ ರಾಶಿ ಇಹವು
ಹಲವು ವ್ಯಾಧಿಯ ಬೀಡು ಪಂಚ ಭೂತದ ನಾಡು
ಹುಲು (ಬಲುಹು) ದೇಹವ ನೆಚ್ಚಿ ಕೆಡಬೇಡ ಮನವೆ ॥ 1 ॥

ಸತಿ ಸುತರು ಹಿತರೆಂದು ಮತಿ ಮರೆತು ಮಮತೆಯಲಿ
ಅತಿಕಾಂಕ್ಷೆಯಿಂದ ದುರ್ವಿಷಯ ಬಲಿದು
ಸತತ ಲಕ್ಷ್ಮೀಪತಿಯ ಶರಣೆನದೆ ಇಹಪರದ (ಶರಣೆನ್ನದಿಹಪರದ)
ಗತಿ ಶೂನ್ಯನಾಗಿ (ನೀ) ಕೆಡಬೇಡ ಮನವೆ ॥ 2 ॥

ಪರರ ನಿಂದಿಸದೆ ಪರ ವಧುಗಳನು ಬಯಸದೆ

ಗುರು ವಿಪ್ರ ಸೇವೆಯನು ಮಾಡು ಬಿಡದೆ
ಹರಿ ಸ್ತುತಿಯ ನೀ ಕೇಳು ಹರಿ ಕೀರ್ತನೆಯ ಪಾಡು
ಪರಮ (ಸಿರಿ) ಪುರಂದರ ವಿಠಲನೊಲಿದು ಪಾಲಿಸುವ ॥ 3 ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ನಿತ್ಯವಲ್ಲ – ಎಂದೆಂದಿಗೂ ಇರುವುದಿಲ್ಲ; ಮರಣಕ್ಕೆ ಈಡಾಗುವುದು.

ಪಂಚಭೂತದ ನಾಡು – ಪೃಥ್ವೀ, ಅಪ್, ತೇಜ, ವಾಯು ಮತ್ತು ಆಕಾಶಗಳೆಂಬ ತನ್ಮಾತ್ರಗಳಿಂದ ಆದ ಮಹಾಭೂತಗಳು ಪರಸ್ಪರ ಸಂಘಟನೆಯಾಗಿ ಸಿದ್ಧವಾದ ಸ್ಥೂಲ ಶರೀರ; ಈ ಮಹಾಭೂತಗಳಿಗೆ ಕಾರ್ಯಕ್ಷೇತ್ರವಾಗಿರುವುದು.

ಬಲುಹು – ಬಲ್ಪು; ಬಲ, ವೀರ್ಯ.

ಅತಿಕಾಂಕ್ಷೆಯಿಂದ... – ದೇವರು ತಾನಾಗಿ ಕೊಟ್ಟಿದ್ದನ್ನು ಮೀರಿ (ಅತಿ) ಆಸೆಪಟ್ಟು, ಕೆಟ್ಟ ಕೆಟ್ಟ ವಿಷಯ ಸುಖಗಳನ್ನೇ ಹೆಚ್ಚಿಸಿಕೊಂಡು.

ಗತಿಶೂನ್ಯವಾಗಿ – ದಿಕ್ಕು ಕಾಣದೆ; ಪುರುಷಾರ್ಥದ ದಾರಿಯನ್ನು ತಿಳಿಯದೆ.

Classification: Keerthane
Ankita: purandara vittala
Location: NA
Category: Jeevanoddhara, Virakti, Aartha Bhava
Sub-Category: deha, sukha, rakta, roga, patni, Lakshmi, vipra, maga, makkalu, mana, krishna, brahmana, hennu, vairagya,
Pravachana: NA
Explanation: NA